ಯೋಗ್ಯತೆ ಇಲ್ಲ. ಅಲ್ಲಿ ಸಾವಿರಾರು ಕೋಟಿ ರೂಪಾಯಿ ಲೂಟಿಯಾಗಿದೆ, ಸರ್ವನಾಶವಾಗಿದೆ. ಇದನ್ನು ಸರಿಪಡಿಸುವಂತಹ ಯಾವುದೇ ಯೋಗ್ಯತೆ ಇಲ್ಲದೆ ಮತ್ತೆ ಐ.ಪಿ. ಸೆಟ್‌ಗಳಿಗೆ ಮೀಟರ್ ಹಾಕುತ್ತೇವೆ ಎಂದು ಹೇಳುವಂತಾದ್ದು ಆದರೆ ಬಹುಶಃ ನಿಮ್ಮ ಕೊನೆಗಾಲ ಸಮೀಪವಾಗಿರಬೇಕಾದರೆ ಯಾರು ನಿಮ್ಮನ್ನು ರಕ್ಷಣೆ ಮಾಡುವುದಕ್ಕಾಗುತ್ತದೆ? ನಾನು ಈ ಮಾತನ್ನು ಹೇಳುತ್ತಾ, ಗೌರವದಿಂದ ನಾನು ಇಲ್ಲಿಂದ ಹೋಗುತ್ತಿದ್ದೇನೆ. ಜನತೆಗೆ ಕರೆ ಕೊಡುತ್ತೇನೆ. ಲಕ್ಷಾಂತರ ಜನ ಖರ್ಚು ಮಾಡಿಕೊಂಡು ಬಡಿಗೆ ತೆಗೆದುಕೊಂಡು ಶಾಸಕರ ಭವನಕ್ಕೆ ಬನ್ನಿ. ಇವತ್ತು ಸರ್ಕಾರದ ಪರವಾಗಿ ನಿಂತಿರುವವರನ್ನು ಬಹಿಷ್ಕಾರ ಮಾಡಿ ಎಂದು ಕರೆಯನ್ನು ಕೊಡುತ್ತೇನೆ. ಹೋರಾಟ ಯಾವರೀತಿ ಆಗುತ್ತದೆಂದು ಕಾದು ನೋಡಿ. ನಾನು ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ನಮಗೆ ಸರ್ಕಾರದ ಉತ್ತರದಿಂದ ಸಮಾಧಾನ ತಂದಿಲ್ಲ. ನಾವು ನಿರಂತರವಾಗಿ ಸರ್ಕಾರದ ವಿರುದ್ಧ ಇದು ರೈತರ ವಿರೋಧಿ ಸರ್ಕಾರ ಎಂದು ಹೇಳುತ್ತಿದ್ದೇನೆ. ಒಂದೇ ಸಮವಾಗಿ ವಿದ್ಯುಚ್ಛಕ್ತಿ ಬಗ್ಗೆ ಈ ಸದನದಲ್ಲಿ ಹತ್ತಾರು ಭಾರಿ ಸಭೆಗಳನ್ನು ಮಾಡಿದ್ದೇವೆ. ಈ ಸಭೆಗಳಿಗೆ ರೈತರ ಬಗ್ಗೆ ಸ್ವಲ್ಪ ಕೂಡ ಕಾಳಜಿ ಇಲ್ಲ. ಇದು ರೈತ ವಿರೋಧಿ ಸರ್ಕಾರ ಎಂದು ಹೇಳಿ ನಾವು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ರೈತ ವಿರೋಧಿ ಸರ್ಕಾರವನ್ನು ನಾನೂ ಕೂಡ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು ಕೂಡ ಸಭಾತ್ಯಾಗ ಮಾಡಿದರು)

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಉಪಾಧ್ಯಕ್ಷರೇ, ಈಗ 11 ಲಕ್ಷ ಪಂಪ್‌ಸೆಂಟ್‌ಗಳಿವೆ ಇದಕ್ಕೆ ಇವತ್ತು ಇವರು ಸೆಕ್ಯೂರಿಟಿ ಡೆಪಾಸಿಟ್ ಕೇಳುತ್ತಿದ್ದಾರೆ. ಯಾರಿಗೂ ಕೂಡ ಅದಕ್ಕೆ ಮುನ್ಸೂಚನೆ ನೋಟೀಸ್ ಕೊಟ್ಟಿಲ್ಲ. ಸೆಕ್ಯೂರಿಟಿ ಡೆಪಾಸಿಟ್ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ಇವತ್ತು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ. ಮುಂದೆ ನೀವೂ ಕೊಡತಕ್ಕಂಥ ಸಂದರ್ಭದಲ್ಲಿ ಯಾವ ಕಾನೂನು ತರುತ್ತೀರೋ, ನಿಯಮಾವಳಿ ಮಾಡುತ್ತೀರೋ ಆ ಪ್ರಕಾರ ಮಾಡಿ. ಈ ಹಾಲಿ ಏನು ಪಂಪ್‌ಸೆಟ್ ಇದೆ ಅದಕ್ಕೆ ಸೆಕ್ಯೂರಿಟಿ ಡೆಪಾಸಿಟ್ ಕೇಳಬೇಕಾದಂತಹ ಅಗತ್ಯವಿಲ್ಲ. ಅದಕ್ಕೆ ನೀವು ನೋಟೀಸ್